ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಸಚಿವರು) :

ಅ) ಮೈಸೂರು ಜಿಲ್ಲೆಯಲ್ಲಿರುವ 11 ತಾಲ್ಲೂಕುಗಳಿಗೆ 1991-92ನೇ ಸಾಲಿನಲ್ಲಿ 67 ಕಿರು ನೀರು ಸರಬರಾಜು ಯೋಜನೆಗಳನ್ನು ಮಂಜೂರು ಮಾಡಲಾಗಿದೆ. ಈ ಕಾಮಗಾರಿಗಳ ಹಂತಗಳು ಕೆಳಗಿನಂತಿವೆ.

1.	ಅಂದಾಜು ಮಂಜೂರಾಗಬೇಕಾಗಿರುವ ಯೋಜನೆಗಳು	12
2.	ಅಂದಾಜು ಪಟ್ಟಿ ಮಂಜೂರಾಗಿ ಜಲಮೂಲ ಇತ್ಯರ್ಥವಾಗಬೇಕಾಗಿರುವ ಯೋಜನೆಗಳು	7
3.	ಕೊಳವೆಬಾವಿ ಕೊರೆಯುವ ಯೋಜನೆಗಳು	16
4.	ರೈಸಿಂಗ್ ಮೈನ್ ಕೆಲಸ ಮುಗಿದಿರುವ ಯೋಜನೆ	11
5.	ಎಲ್ಲಾ ಕೆಲಸಗಳು ಮುಗಿದಿದ್ದು ವಿದ್ಯುಚ್ಛಕ್ತಿ ಬೇಕಾಗಿರುವ ಯೋಜನೆಗಳು	14
6.	ನೀರು ಸರಬರಾಜು ಮಾಡಲಾಗಿರುವ ಯೋಜನೆಗಳು	7
	ಒಟ್ಟು	67

ಆ) ಯೋಜನೆಗಳು ವಿವರ 1991-92ನೇ ಸಾಲಿನಲ್ಲಿ ಮಂಜೂರಾಗಿರುವ ಯೋಜನೆಗಳು:

ಅ.	ಎನ್‌ಆರ್ ಡಬ್ಲ್ಯೂ ಎಸ್	3
ಆ.	ಕಿರು ನೀರು ಸರಬರಾಜು	11
ಇ.	ಎ.ಆರ್. ಡಬ್ಲ್ಯೂ	7

ಇ) ಎಸ್‌ಆರ್‌ಡಬ್ಲ್ಯೂಎಸ್ ಮತ್ತು ಎಆರ್‌ಡಬ್ಲ್ಯೂಎಸ್ ಯೋಜನೆಗಳನ್ನು 3 ವರ್ಷಗಳಲ್ಲಿ ಮತ್ತು ಕಿರು ನೀರು ಸರಬರಾಜು ಯೋಜನೆಗಳನ್ನು ಒಂದು ವರ್ಷದಲ್ಲಿಯೇ ಪೂರ್ಣಗೊಳಿಸುವ ಉದ್ದೇಶವಿದೆ. ಆದರೆ ಕೆಲವು ಯೋಜನೆಗಳಲ್ಲಿ ಜಲಮೂಲ ಇತ್ಯರ್ಥವಾಗದೆ ವಿಳಂಬವಾಗುವ ಸಾಧ್ಯತೆ ಇರುತ್ತದೆ.

ತುಮಕೂರು.ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳಿಗೆ ನೀರಿನ ಸೌಕರ್ಯ

191-ಶ್ರೀ ಟಿ.ಬಿ. ಜಯಚಂದ್ರ (ಕಳ್ಯಂಬೆಳ್ಳ): ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳಿಗೆ ಶಾಶ್ವತವಾಗಿ ಹಿಂದುಳಿದ ಜಿಲ್ಲೆಗಳಾಗಿದ್ದು ಯಾವುದೇ ನೀರಾವರಿ ಸೌಕರ್ಯ ಇಲ್ಲಿಯವರೆಗೂ ಇಲ್ಲದೇ ಇರುವುದು ಸರ್ಕಾರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಜಿಲ್ಲೆಗಳಿಗೆ ನೀರನ್ನೊದಗಿಸಲು ಭದ್ರಾ ಮೇಲ್ದಂಡೆ ಮತ್ತು ನೇತ್ರಾವತಿ ಯೋಜನೆಗಳ ಅನುಷ್ಠಾನದಿಂದ ಸಾಧ್ಯವೇ?

ಇ) ಹಾಗಿದ್ದಲ್ಲಿ ಈ ಯೋಜನೆಗಳ ಹಂತ ಮತ್ತು ಸರ್ಕಾರದ ಕಾರ್ಯಕ್ರಮ ಏನು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಹಾಗೂ ಮಧ್ಯಮ ನೀರಾವರಿ ಸಚಿವರು) :

ಅ) ತುಮಕೂರು, ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳ ಹಲವು ಪ್ರದೇಶಗಳಿಗೆ ಮಧ್ಯಮ ಮತ್ತು ಸಣ್ಣ ನೀರಾವರಿ ಸೌಲಭ್ಯ ಇದೆ.

ಅ) ಈ ಪ್ರಸ್ತಾವನೆಗಳು ಇನ್ನೂ ಪರಿಶೀಲನಾ ಹಂತದಲ್ಲಿವೆ.

ಮಂಡಲ ಪಂಚಾಯತ್, ಜಿಲ್ಲಾಪರಿಷತ್ ಚುನಾವಣೆ

85-ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಮಂಡಲ ಪಂಚಾಯತಿ ಹಾಗೂ ಜಿಲ್ಲಾಪರಿಷತ್‌ಗಳಿಗೆ ಚುನಾವಣೆ ಯಾವಾಗ ನಡೆಸಲಾಗುವುದು?

ಆ) ಮಂಡಲ ಪಂಚಾಯಿತಿ ಹಾಗೂ ಜಿಲ್ಲಾ ಪರಿಷತ್ತುಗಳಿಗೆ ಚುನಾವಣೆಯ ಮತದಾರರನ್ನು ನಿರ್ದಿಷ್ಟಗೊಳಿಸಲಾಗುವುದೇ?

ಇ) ಜಿಲ್ಲಾಪರಿಷತ್ತಿನ ಕಾಯಿದೆಯು ಈಗಿರುವಂತೆ ಮುಂದುವರಿಯುವುದೇ ಅಥವಾ ತಿದ್ದುಪಡಿ ತರಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಮತ್ತು ಆ) ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳ ಹೊಸ ವಿಧೇಯಕವು ಜಾರಿಗೆ ಬಂದ ಕೂಡಲೇ ಕ್ಷೇತ್ರ ಪುನರ್ ವಿಂಗಡಣೆ ಕಾರ್ಯವನ್ನು ಕೈಗೊಂಡು ಪ್ರತಿಯೊಂದು ಕ್ಷೇತ್ರದ ಮತದಾರರ ಪಟ್ಟಿ ಪೂರ್ಣಗೊಂಡ ನಂತರ ಚುನಾವಣೆ ದಿನಾಂಕವನ್ನು ಪ್ರಕಟಿಸಲಾಗುವುದು.

ಇ) ತಿದ್ದುಪಡಿ ತರಲಾಗುವುದು.

ಗಂಗಾ ಕಲ್ಯಾಣ ಯೋಜನೆ

23-ಶ್ರೀ ಇಲ್ಕಲ್ ವಿಜಯಕುಮಾರ್ (ಹೊಸದುರ್ಗ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಗಂಗಾ ಕಲ್ಯಾಣ ಯೋಜನೆಯ ಉದ್ದೇಶಿತ ಗುರಿ ಅನುಷ್ಠಾನದಲ್ಲಿ ಪ್ರಗತಿದಾಯಕವಾಗಿದೆಯೇ?

ಆ) ಇದರ ಉಸ್ತುವಾರಿ ಹೊಣೆಯನ್ನು ಯಾರಿಗೆ ವಹಿಸಲಾಗಿದೆ?

ಇ) ಹೊಸದುರ್ಗ ತಾಲ್ಲೂಕಿನ ಆರು ಗಂಗಾ ಕಲ್ಯಾಣ ಯೋಜನೆಗಳು ಯಾವ ರೀತಿ ಕಾರ್ಯ ನಿರ್ವಹಿಸುತ್ತಿವೆ?

ಈ) ಇವುಗಳಲ್ಲಿ ಕೆಲವು ಆರಂಭದಿಂದಲೂ ಕೆಲಸ ಮಾಡದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ(ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಸಮಾಧಾನಕರವಾಗಿರುತ್ತದೆ.

ಆ) ಜಿಲ್ಲಾ ಪರಿಷತ್‌ಗಳು ಅಸ್ತಿತ್ವಕ್ಕೆ ಬಂದ ನಂತರ ಈ ಯೋಜನೆಯ ನಿರ್ಮಾಣವನ್ನು ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗಗಳು ನಿರ್ವಹಿಸುತ್ತಿವೆ. ಕೆಲಸಗಳು ಪೂರ್ಣಗೊಂಡ ನಂತರ ಸಮಾಜ ಕಲ್ಯಾಣ ಇಲಾಖೆಗೆ ನಿರ್ವಹಣೆಗಾಗಿ ವಹಿಸಿಕೊಡಲಾಗುವುದು.

ಇ) ಹೊಸದುರ್ಗ ತಾಲ್ಲೂಕಿನಲ್ಲಿ ಆರು ಗಂಗಾ ಕಲ್ಯಾಣ ಯೋಜನೆಗಳು ಇರುವುದಿಲ್ಲ. ಇರುವ ಒಂದು ಗಂಗಾ ಕಲ್ಯಾಣ ಯೋಜನೆಯು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಾ ಇದೆ.

ಈ) ಇದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.